ದಿಃ06.12.2022 O S No.192/2015 PW-1

ದಿಃ06.12.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಲ್ ಎ ವಕೀಲರಿಂದ

ಸದರಿ ಮನೆಯು ಖಾನೇಷು ಮಾರಿ 127 ನಂತರ 290/290 ನಂಬರ್ ಗ್ರಾಮಾಠಾಣಾ ವ್ಯಾಪ್ತಿಗೆ ಸೇರಿದೆ ಎಂದರೆ ಸಾಕ್ಷಿ ಹೌದು ಆದರೆ ಅದು ಸರ್ವೆ ನಂಬರ್ ಗೆ ಸೇರಿದ್ದು ಅನಧಿಕೃತವಾಗಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಬಿ ವಿ ಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಪರವಾನಿಗೆ ಪಡೆದುಕೊಂಡು 1998-1999 ರ ಸಾಲಿನಲ್ಲಿ ಸರ್ಕಾರದಿಂದ ಅನುದಾನ ಪಡೆದು ಶೌಚಾಲಯವನ್ನು ನಿರ್ಮಿಸಿದ್ದಾರೆ ಎಂದರೆ ಸರಿ. ದಿ.13.03.1996 ರಿಂದ ಪರವಾನಿಗೆ ಪಡೆದುಕೊಂಡು ಹಾಲು ಉತ್ಪಾದಕರ ಸಹಾಕರ ಸಂಘವನ್ನು ಸಹ ಗ್ರಾಮಸ್ಥರು ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ. ಹಾಲು ಉತ್ಪಾದಕರ ಸಹಕಾರ ಸಂಘದ ಚೆಕ್ಕು ಬಂದಿ ಪೂರ್ವಕ್ಕೆ ಬಾಬಯ್ಯನ ಮಠ, ಪಶ್ಚಿಮಕ್ಕೆ ಸರ್ಕಾರಿ ಪಾಳು ಮತ್ತು ಹರಳೀಕಟ್ಟೆ, ಉತ್ತರಕ್ಕೆ ಬಿ ಪ್ರಕಾಶ್ ರವರ ಮನೆ ಮತ್ತು ಪಾಳು, ದಕ್ಷಿಣ ರಸ್ತೆ ಇದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ್ನು ನೀವು ಖರೀದಿ ಮಾಡುವುದಕ್ಕೂ ಮೊದಲು ಪ್ರತಿವಾದಿಯ ಮನೆ, ಶೌಚಾಲಯ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘ ಇತ್ತು ಎಂದರೆ ಸರಿ. ಸರ್ವೆ ನಂಬರ್ 153/2 ರ ಪಹಣಿ ಪ್ರಕಾರ ಪ್ರತಿವಾದಿಗೆ 2 1/4 ಗುಂಟೆ ಇದೆ ಎಂದರೆ ಸರಿ. ಆದರೆ ಪ್ರತಿವಾದಿ ಮುಕ್ಕಾಲು ಗುಂಟೆ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನೀವು ಪ್ರತಿವಾದಿಗೆ ಸೇರಿದ 2 1/4 ಗುಂಟೆಯಲ್ಲಿ ಮುಕ್ಕಾಲುಗುಂಟೆ ಯಲಿಲ ಪ್ರತಿವಾದಿ ಸ್ವಾದೀನದಲ್ಲಿ ಇದ್ದು ಉಳಿದ ಜಮೀನಿನಲ್ಲಿ ನೀವು ಸ್ವಾದೀನದಲ್ಲಿ ಇದ್ದೀರಾ ಎಂದರೆ ಸಾಕ್ಷಿ ನಾನು ಮುಕ್ಕಾಲು ಗುಂಟೆಯಲ್ಲಿ ಸ್ವಾದೀನದಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ. ಅರ್ ಟಿ ಸಿ ಯಲ್ಲಿ ನಮೂದು ಆಗಿರುವ ಜಮೀನಿಗೂ ಸ್ವಾದೀನದಲ್ಲಿ ಇರುವ ಜಮೀನಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ನಮ್ಮ ಜಮೀನಿನಲ್ಲಿ ನಾವು ಸ್ವಾದೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು 40 ವರ್ಷಗಳಿಂದಲೂ ಮನೆಕಟ್ಟಿಕೊಂಡು ಸ್ವಾದೀನದಲ್ಲಿ ಇದ್ದಾರೆ ಎಂದರೆ ಹೌದು ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ ನಂತರ ಪ್ರತಿವಾದಿಗಳನ್ನು ನೀವು

ಯಾವುದೇ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ಅವರಿಗೆ ಸೇರಿದ ಮುಕ್ಕಾಲು ಗುಂಟೆ ಯಲ್ಲಿ ಮನೆಯನ್ನು ಕಟ್ಟಿಕೊಂಡಿದ್ದರು ಅದಕ್ಕೆ ನಾನು ಪ್ರಶ್ನೆ ಮಾಡಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 153/3 ರಲ್ಲಿ ಒಂದೂಕಾಲು ಗುಂಟೆ ಮತ್ತು ಸರ್ವೆ ನಂಬರ್ 153/6 ರಲ್ಲಿ ಒಂದೂಕಾಲುಗುಂಟೆ ಸ್ವತ್ತನ್ನು ಪ್ರತಿವಾದಿಗಳು ಅತಿಕ್ರಮ ಪ್ರವೇಶ ಮಾಡಿಲ್ಲ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸುಳ್ಳು ಪ್ರತಿವಾದಿ ಅತಿಕ್ರಮ ಪ್ರವೇಶ ಮಾಡಿ ಶೌಚಾಲಯ ನಿರ್ಮಾಣ ಮಾಡುತ್ತಿದ್ದರು ಎಂಬುದು ಸುಳ್ಳು ಪ್ರತಿವಾದಿಗಳು ಅದಾಗಲೇ ಶೌಚಾಲಯವನ್ನು ನಿರ್ಮಿಸಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ದ ದಾವೆಯನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರಲಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸುವುದಕ್ಕೂ ಮೊದಲು ಅಳತೆಯನ್ನು ಮಾಡಿಸಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸರ್ವೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಸತ್ಯ ಹೊರಬರುತ್ತದೆ ಎಂದು ನ್ಯಾಯಾಲಯಕ್ಕೆ ಸದರಿ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಮಾಡಿಸಿದಂತಹ ಸರ್ವೆ ವರದಿಯ ಪ್ರಕಾರ ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾದೀನಾದಲ್ಲಿ ಇದ್ದಾರೆ ಎಂದರೆ ಸರಿ. ಪ್ರತಿವಾದಿ ನಿಮ್ಮ ಅಣ್ಣನ ಮಗನಾದ ಕಾರಣ ಅವರಿಗೆ ಸುಖ ಸುಮ್ಮನೆ ತೊಂದರೆ ಕೊಡುವ ದುರುದ್ದೇಶದಿಂದ ದಾವೆಯನ್ನು ಪ್ರತಿವಾದಿಯ ವಿರುದ್ದ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.